O.S. No- 3/2019

Pw-2

దినాಂಕಃ 02-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಸಿ ಎಸ್ ಬಿ 3 ರಿಂದ 7,9 ರಿಂದ 13 ನೇ ಪ್ರತಿವಾದಿ ಪರ ವಕೀಲರಿಂದ–**

ನನ್ನ ತಂದೆಯ ಹೆಸರು ಸಿದ್ದಗೊಂಡ ಆಗಿರುತ್ತದೆ. ವಾದಿ ನನ್ನ ದೂರಿನ ಅಣ್ಣತಮ್ಮಂದಿರು ಆಗಬೇಕು ವಾದಿ ಈ ಹಿಂದೆ ಜನತಾ ಪಕ್ಷದಲ್ಲಿ ನಾಯಕರು ಆಗಿದ್ದಾರೆ ಎಂದರೆ ಸರಿ. ಈಗ ವಾದಿ ಬಿಜೆಪಿ ಪಕ್ಷದಲ್ಲಿ ನಾಯಕರು ಆಗಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿ 3 ರಿಂದ 7 ಮತ್ತು 9 ರವರ ಪರಿಚಯ ಇರುತ್ತದೆ. ಇವರು ಕಾಂಗ್ರೆಸ್ ಪಕ್ಷದ ಬೆಂಬಲಿಗರು ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಮಾತನ್ನು ನಾನು ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದ ಮತ್ತು ಅತನ ಕುಟುಂಬದ ಸದಸ್ಯರು ಚರ್ಮ ಹದಾ ಮಾಡಿ ಮಾರಾಟ ಮಾಡುವ ಕೇಲಸ ಮಾಡುತ್ತಾರೆ ಎಂದರೆ ಸರಿ. 7 ಮತ್ತು 9 ನೇ ಪ್ರತಿವಾದಿಯ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ನನ್ನ ಆಸ್ತಿ ಇದ್ದು ಅದು ಕುಲ್ಲಾ ಜಾಗೆ ಆಗಿರುತ್ತದೆ. ದಾವಾ ಆಸ್ತಿಗೆ ಹದ್ದಿಗೆ ಉತ್ತರ ದಿಕ್ಕಿಗೆ ಹತ್ತಿ ನಮ್ಮ ಆಸ್ತಿ ಇರುತ್ತದೆ. ನಮ್ಮ ಆಸ್ತಿಯ ಪಶ್ಚಿಮ ನಿಂಗ್ಗವರವರ ಮಠಪತ್ತಿರವರ ಕುಲ್ಲಾ ಜಾಗೆ ಇರುತ್ತದೆ. ನನ್ನ ಆಸ್ತಿ ನಂಃ 22 ಮತ್ತು 23 ಆಗಿದ್ದು ಅದರ ಉದ್ದ ಅಳತೆ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗೆ 65 ಪುಟ್ಟ ನನ್ನ ಆಸ್ತಿ ಹತ್ತಿರುತ್ತದೆ . ಮತ್ತು ಉಳಿದ ಕ್ಷೇತ್ರ ಎಷ್ಟು ಇದ್ದ ಬಗ್ಗೆ ನನಗೆ ಹೇಳಲು ಬರುವುದಿಲ್ಲ.

ಈಗ ಸಾಕ್ಷಿಗೆ ಒಂದು ಛಾಯಾ ಚಿತ್ರ ತೋರಿಸಲಾಗಿ ಅದರಲ್ಲಿ 7 ನೇ ಪ್ರತಿವಾದಿ ಮತ್ತು ಒಂದು ಕಟ್ಟೆ ಇದ್ದ ಬಗ್ಗೆ ಸಾಕ್ಷಿ ನೋಡಿ ಒಪ್ಪಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿ ಡಿ 1 ಎಂದು ಗುರುತ್ತಿಸಲಾಯಿತು. ಸದರಿ ಕಟ್ಟೆ 7 ನೇಯ ಪ್ರತಿವಾದಿಯ ಮನೆ ಹಿಂದೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಕಟ್ಟೆ ನನ್ನ ಪ್ರಕಾರ 7 ನೇ ಪ್ರತಿವಾದಿಯ ಮನೆಯ ಮುಂದೆ ಇರುತ್ತದೆ. ನಿ ಡಿ 1 ಛಾಯಾ ಚಿತ್ರದಲ್ಲಿ 2 ಬಾಣಿಗಳು ಇವೆ ಎಂದರೆ ಸರಿ. ಸಾಕ್ಷಿ ಮುಂದುವರೇದು ಸದರಿ ಬಾಣಿಗಳನು ಈಗ ಕಟ್ಟಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಬಾಣಿಯನ್ನು ಕಟ್ಟಿ 6 ತಿಂಗಳುಗಳು ಆಗಿರುತ್ತದೆ. ಈ ಮಾತನ್ನು ನಾನು ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಮಾತಂಗಿ ಮತ್ತು ಯಲ್ಲಮ್ಮ ಎಂದು 2 ದೇವರುಗಳು ಇವೆ ಎಂದರೆ ಸರಿಯಲ್ಲ. ಸದರಿ ಕಟ್ಟೆ ಯನ್ನು ಕಟ್ಟಿ 6 ತಿಂಗಳು ಆಗಿರುತ್ತದೆ. ಸದರಿ ಬಾಣಿಯಿಂದ ಊರಿನ ಜನ ಚರ್ಮ ಹದ್ದ ಮಾಡಲು ನೀರು ತೆಗೆದುಕೊಂಡು ಹೋಗುತ್ತಾರೆ ಎಂದರೆ ಸರಿಯಲ್ಲ. ಮಾಂತಗಿ ಮತ್ತು ಯಲ್ಲಮ ದೇವರುಗಳ ಪ್ರತಿ ವರ್ಷ ಬಣದ ಹುಣಿಮೆದಂದು ಜಾತ್ರಿ ಆಗುತ್ತದೆ ಎಂದರೆ ಸರಿಯಲ್ಲ. ಸುಮಾರು 100 ವರ್ಷ್ಗಗಳಿಂದ ಅಲ್ಲಿ ಕಟ್ಟೆ ಇದ್ದು ಜಾತ್ರಿಯೂ ಆಗುತ್ತಾ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಕಟ್ಟೆಗೆ ಊರಿ ಜನರು ಮತ್ತು ಪಂಚಾಯಿರವರು ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿ.

ವಿ ಪಿ ಸಿ ನಂಃ 29 ಕ್ಕೆ ಹೋಗಲು ವಾದಿ ತನ್ನ ಮನೆಯ ಉತ್ತರ ದಿಕಿಗೆ ಜಾಗೆಯನ್ನು ತೆಗೆದುಕೊಂಡಿರುತ್ತಾರೆ ಅದರ ನಂಬರ ನನಗೆ ಹೇಳಲು ಬರುವುದಿಲ್ಲ. ಅದರ ಅಗಲ ಮೂರು ಮಳ ಇದ್ದು ಎಷ್ಟು ಅಡಿ ಉದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಜಾಗೆಯುನ್ನು ತೆಗೆದುಕೊಂಡು ಸುಮಾರು 70 ರಿಂದ 80 ವರ್ಷಗಳು ಆಗಿರುತ್ತದೆ. ಸದರಿ ಜಾಗೆಯ ಪೂರ್ವ ದಿಕ್ಕಿಗೆ ತಿಮ್ಮಪ್ಪನ ಆಸ್ತಿ ಇರುತ್ತದೆ . ಪಶ್ಚಿಮಕ್ಕೆ ಸಂಗಪ್ಪ ಬಿರಾದಾರವರ ಕುಲ್ಲಾ ಜಾಗೆ ಇದೆ . ಉತ್ತರಕೆ ರಸ್ತೆ ಇದೆ . ದಕ್ಷಿಣಕ್ಕೆ ತಿಮ್ಮಪನ್ನ ಉಳಿಕೆ ಜಾಗ ಇರುತ್ತದೆ. ದಾವ ಆಸ್ತಿಗೆ ಒಟ್ಟು 6 ಜನರ ಆಸ್ತಿ ಹತ್ತುತ್ತದೆ . ದಾವಾ ಆಸ್ತಿಯನ್ನು ಅಳತೆಯ ಮಾಡಲು ದಿನಾಂಕಃ 14-11-2016 ರಂದು ಪಂಚಾಯಿತಿರವರು ಬಂದಿರುತ್ತಾರೆ.

ಆ ಕಾಲಕ್ಕೆ ಅಳತೆ ಮಾಡಲು ಪಂಚರು ಬಂದಿರುತ್ತಾರೆ. ನಾನು ಆ ಸಮಯದಲ್ಲಿ ಹಾಜರಿದ್ದೆ ಪಂಚಾಯಿತಿರವರು ನನಗೆ ಅಳತೆ ಮಾಡುವ ಪೂರ್ವದಲ್ಲಿ ನೋಟಿಸು ಕೊಟ್ಟಿರುತ್ತಾರೆ. ಪಂಚಾಯಿತಿರವರು ಅಳತೆ ಮಾಡಿದ ನಂತರ ನನ್ನ ಸಹಿಯನ್ನು ಪಡೆದುಕೂಂಡಿರುತ್ತಾರೆ. ನಾನು ಪಂಚಾಯಿತಿರವರಿಗೆ ಕಾಗದ ಪತ್ರ ಗಳನ್ನು ಕೊಟ್ಟಿರುವುದಿಲ್ಲ. ಆ ಕಾಲಕ್ಕೆ ಮೊಬೈಲನಲ್ಲಿ ಛಾಯಾ ಚಿತ್ರ ವನ್ನು ತೆಗೆದಿರುವುದಿಲ್ಲ.

ಈಗ ಸಾಕ್ಷಿಗೆ ಒಂದು ಛಾಯಾ ಚಿತ್ರ ತೋರಿಸಲಾಗಿ ಅದರಲ್ಲಿರುವ ಎಮ್ಮೆ ಗಳು ಮತ್ತು ಖರುಗಳು 7 ನೇ ಪ್ರತಿವಾದಿಗೆ ಸೇರಿರುತ್ತದೆ ಎಂದು ತೋರಿಸಲಾಗಿ ಅದನ್ನು ನೋಡಿ ನಿರಾಕಸಿಲಾಗಿದೆ. ಮತ್ತು ಸಕ್ಷಿಗೆ ಇನ್ನೊಂದು ಛಾಯಾ ಚಿತ್ರ ತೋರಿಸಲಾಗಿ ಅರದಲ್ಲಿ 7 ನೇ ಪ್ರತಿವಾದಿ ಹಾಜರಿದ್ದ ಬಗ್ಗೆ ಕೇಳಲಾಗಿ ನೋಡಿ ನಿರಾಕರಿಸಿರುತ್ತಾರೆ.

ಅಳತೆ ಮಾಡುವ ಪೂರ್ವದಲ್ಲಿ ನನಗೆ ತಾಲ್ಲೂಕು ಸರ್ವೆದವರು ನೋಟಿಸು ನೀಡಿರುತ್ತಾರೆ. ಪಂಚಾಯಿತಿರವರು ಅಳತೆ ಮಾಡುವ ಕಾಲಕ್ಕೆ ಪಂಚಾಯಿತಿಯ ಸದಸ್ಯರು ಹಾಜರಿದ್ದರು ಆದರೆ ಸರ್ವೆರವರು ಅಳತೆ ಮಾಡಲು ಬಂದಾಗ ಪಂಚಾಯಿತಿಯ ಸದಸ್ಯರು ಹಾಜರಿರಲಿಲ್ಲ. 7 ಮತ್ತು 8 ನೇ ಪ್ರತಿವಾದಿ ದಾವಾ ಆಸ್ತಿಯ ಅತೀಕ್ರಮೇಣ ಮಾಡಿರುತ್ತಾರೆ ಎಂದು ಸುಳ್ಳಾಗಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೇದು 8 ನೇ ಪ್ರತಿವಾದಿ ಅತಿಕ್ರಮೇಣ ಮಾಡಿದ ಜಾಗೆಯನ್ನು ತೆಗೆದುಕೊಳುತ್ತೇನೆ ಎಂದು ಬರೆದುಕೊಟ್ಟು ಈಗ ಅದನು ತೆಗೆದಿರುತ್ತಾಳೆ ಎಂದು ನುಡಿಯುತ್ತಾರೆ. ಈ ಮಾತನ್ನು ನಾನು ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಪಿಸಿ ನಂಬರ 29 ರ ಪಶ್ಚಿಮಕ್ಕೆ ರಸ್ತೆ ಇರುತ್ತದೆ ಎಂದರೆ ಸುಳ್ಳು ಅಲ್ಲಿ ನಮ್ಮ ಅಣ್ಣತಮ್ಮಂದಿರ ಮನೆ ಮತ್ತು ಕುಲ್ಲಾ ಜಾಗೆ ಇರುತ್ತದೆ ಅದರ ನಂಬರ ನನಗೆ ಹೇಳಲು ಬರುವುದಿಲ್ಲ. ಪಂಚಾಯಿತಿರವರು ಮತ್ತು ತಾಲ್ಲೂಕು ಸರ್ವೆರವರು ಬಂದು ನನ್ನ ಸಮಕ್ಷಮ ದಾವಾಆಸ್ತಿಯನ್ನು ಅಳತೆ ಮಾಡಿರುತ್ತಾರೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹ ವಾದಿ ನನ್ನ ದೂರಿನ ಅಣ್ಣತಮ್ಮಂದಿರು ಆಗಿದ ಕಾರಣ ಅವರಿಗೆ ಸಾಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೇದು 3 ರಿಂದ 6 ನೇ ಪ್ರತಿವಾದಿಗಳು ನನ್ನ ಅಣ್ಣತಮ್ಮಂದಿರು ಆಗಬೇಕೆಂದು ನುಡಿಯುತ್ತಾರೆ. ವಿ ಪಿ ಸಿ 29 ರಲ್ಲಿ ಹಿಂದಿನಿಂದ ಇಲ್ಲಿಯವರೆಗೆ 7 ನೇ ಪ್ರತಿವಾದಿ ಮತ್ತು ಕಬ್ಜಾ ಮತ್ತು ವಹಿವಾಟದಲ್ಲಿದ್ದು ಮತ್ತು ಮಾಂತಗಿ ಮತ್ತು ಯಲ್ಲಮ್ಮ ದೇವರ ಕಟ್ಟೆ ಸಹ ಇರುತ್ತದೆ ಎಂದರೆ ಸರಿಯಲ್ಲ. ಕಟ್ಟೆ, ಮತ್ತು ಬಾಣಿಗಳು 7 ನೇ ಪ್ರತಿವಾದಿಯ ಆಸ್ತಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ವಿಪಿಸಿ ನಂಬರ 29 ರಲ್ಲಿ ಎಂದಿಗೂ ಸಹ ವಾದಿ ಮಾಲೀಕನಾಗಲಿ , ಕಬ್ಜಾ ಮತ್ತು ವಹಿವಾಟದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ವಿಪಿಸಿ ನಂಬರ 29 ರ ಉದ್ದ ಅಳತೆ ಪೂರ್ವ ಪಶ್ಚಿಮ 73 ಅಡ್ಡಿ ಮತ್ತು ದಕ್ಷಿಣ ಉತ್ತರ 65 ಅಡ್ಡಿ ಇರುತ್ತದೆ ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ನನಗೆ ನ್ಯಾಯಾಲಯದಿಂದ ಸಾಕ್ಷಿಯನ್ನು ನುಡಿಯಲು ಯಾವುದೇ ಸಮನ್ಸ ಬಂದಿರುವುದಿಲ್ಲ ವಾದಿ ಸಾಕ್ಷಿಯನ್ನು ನುಡಿಯಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ